


ಇನ್ನೊಬ್ಬರ ತಪ್ಪು ಬೇಗ
ಗೋಚರವಾಗುತ್ತದೆ.
ಇನ್ನೊಬ್ಬರ ಕಷ್ಟ ಅರಿವಿಗೆ
ಬರುವುದು ನಿಧಾನ

# ಅನ್ಯೋನ್ಯ

● ವೇಣುಗೋಪಾಲ ಸೊರಬ

ಅಪರೂಕ್ಕೊಮ್ಮೆ ಬಂದಿದ್ದ ಸತ್ಯಜಿತ್ ರೇ ಫಿಲ್ಮ್‌ನ ಕೊನೆಯ ದಿನ. ಅದರ ಪ್ರಾರಂಭದ ದಿನದಿಂದಲೂ ಮಧು–ನಾನು ಪ್ಲಾನ್ ಹಾಕಿದ್ದೂ ಹಾಕಿದ್ದೇ. ಮಾರ್ನಿಂಗ್ ಷೋ ಇಲ್ಲ. ಮ್ಯಾಟನಿ ಇಲ್ಲ... ಅಂದರೆ ಎರಡೂ ಅಸಾಧ್ಯ. ಉಳಿದದ್ದು ಫಸ್ಟ್ ಷೋ. ಅದಕೂ ನೂರೆಂಟು ವಿಘ್ನಗಳು. ಅಂತೂ ಈ ಕೊನೆಯ ದಿನವೇ ಕೊನೆಗೂ ಗಂಟು ಬಿದ್ದದ್ದು. ಮಧು–ನಾನು ಒಟ್ಟಿಗೆ ಅಲ್ಲದೆ ಬೇರೆ ಬೇರೆಯಾಗಿ ಚಿತ್ರವನ್ನು ನೋಡುವುದೇ ಇಲ್ಲವೆಂದಲ್ಲ. ಆದರೂ ಯಾವುದೇ ಅತ್ಯುತ್ತಮವಾದದ್ದೊ ಅದನ್ನು ಒಟ್ಟಿಗೆ ಸವಿದಾಗಲೇ ಅದರಲ್ಲೊಂದು ಅಪೂರ್ವ ಶೋಭೆ.

ಇಂತಹ ಊರಿನಲ್ಲಿ ಈ ಫಿಲ್ಮ್‌ಗೆ ರಿಸರ್ವ್ ಮಾಡಿಸುವ ಅವಶ್ಯಕತೆಯೇ ಬರುವುದಿಲ್ಲ. ಆದರೂ ನಾನು ಟಿಕೆಟ್ ಬೂತ್‌ನಲ್ಲಿ 6:30ರವರೆಗೂ ಕಾಯಲೇಬೇಕಾಯಿತು. ಟಿಕೆಟ್ ಸಿಕ್ಕುವುದು ಕಷ್ಟ ಎಂದಲ್ಲ. ಆದರೆ ಮಧು ಬರಲೇ ಇಲ್ಲವಲ್ಲ. ಇವಳಿಗೆ ಯಾವಾಗಲೂ